**ಸಾಕ್ಷಿಗೆ ದಿನಾಂಕಃ05-02-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಮುಂದುವರೆದ ಪಾಟೀ ಸವಾಲು :: ವಾದಿ ಪರ ಶ್ರೀ. HSN ವಕೀಲರಿಂದ ::**

1 ನೇ ಪ್ರತಿವಾದಿ ಪ್ರಸ್ತುತದಲ್ಲಿ ದಾವಣಗೆರೆ ಪೇಟೆಯಲ್ಲಿ ವಾಸವಾಗಿದ್ದಾರೆ. 2 ನೇ ಪ್ರತಿವಾದಿ ಪ್ರಸ್ತುತದಲ್ಲಿ ಅಜ್ಜಂಪುರ ಪೇಟೆಯಲ್ಲಿ ವಾಸವಾಗಿದ್ದಾರೆ. ಪ್ರತಿವಾದಿಗಳಿಗೆ ಕೆ ಚಟ್ಟನಹಳ್ಳಿ ಗ್ರಾಮದಲ್ಲಿ ಯಾವುದೇ ಆಸ್ತಿಗಳು ಇರುವುದಿಲ್ಲ. ನಾನು ಪ್ರಸ್ತುತದಲ್ಲಿ ಅಜ್ಜಂಪುರ ಪೇಟೆಯಲ್ಲಿ ವಾಸವಾಗಿರುತ್ತೇನೆ. ನನಗೆ ಅಜ್ಜಂಪುರ ತಾಲ್ಲೂಕಿನಲ್ಲಿ ಯಾವುದೇ ಆಸ್ತಿ ಇರುವುದಿಲ್ಲ. ಅಮೃತಾಪುರ ಹೋಬಳಿಯಲ್ಲಿ ನನ್ನ ಯಾವುದೇ ಆಸ್ತಿಗಳು ಇರುವುದಿಲ್ಲ. ಪ್ರತಿವಾದಿಗಳ ಜಮೀನು ಪ್ರಸ್ತುತದಲ್ಲಿ ಚನ್ನಗಿರಿ ತಾಲ್ಲೂಕಿನ ಶಂಕರಪುರದಲ್ಲಿ 7 ಎಕರೆ ಜಮೀನು ಇದ್ದು ಅದರಲ್ಲಿ ಅವರ ಕುಟುಂಬದ 8 ಜನ ಹಕ್ಕುದಾರರು ಇರುತ್ತಾರೆ. ಪ್ರತಿವಾದಿಗಳು ಸರ್ವೇ ನಂಬರ್ 25 ರಲ್ಲಿ 4 ಎಕರೆ 10 ಗುಂಟೆ ಜಮೀನು ಅನ್ನು ಬಗರ್ ಹುಕ್ಕುಂ ಅಡಿಯಲ್ಲಿ ಸಾಗುವಳಿ ಮಾಡುತ್ತಿದ್ದಾರೆ. ಪ್ರತಿವಾದಿಗಳು ಇಬ್ಬರು ಸದರಿ ಸರ್ವೇ ನಂಬರ್ ನಲ್ಲಿ ತಲಾ 4 ಎಕರೆ ಮಂಜೂರು ಕೋರಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಮಂಜೂರಾತಿ ಅರ್ಜಿ ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ಆದರೆ ಸದರಿ ಮಂಜೂರಾತಿ ದಾಖಲೆಗಳಲ್ಲಿ ವಜಾ ಆಗಿರುವ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿ. ಸಾಕ್ಷಿ ಸದರಿ ದಾಖೆಯನ್ನು ತೋರಿಸಲಾಗಿ ಅದನ್ನು ಒಪ್ಪಿದ ಕಾರಣ ಅದನ್ನು ನಿಪಿ12 ಎಂದು ಗುರುತಿಸಲಾಯಿತು. ಸದರಿ ಅರ್ಜಿಗಳು ಪ್ರತಿವಾದಿಗಳು ಯಾವುದೇ ಅನ್ನು ಸಾಗುವಳಿ ಮಾಡಿರುವುದಿಲ್ಲ ಎಂದು ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ವಾದಿಗೆ ಬಗರ್ ಹುಕ್ಕುಂ ಅಡಿ ಸಾಗುವಳಿ ಮಾಡುತ್ತಿರುವ ಜಮೀನಿಗೂ ಹಾಗೂ ಪ್ರತಿವಾದಿಗಳು ಮಂಜೂರಾತಿ ನೀಡಿ ಅರ್ಜಿ ನೀಡಿರುವ ಜಮೀನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸರ್ವೇ ನಂಬರ್ 25 ರಲ್ಲಿ ನಾನು ಹೇಳುತ್ತಿರುವ ಪ್ರತಿವಾದಿಗಳು ಸಾಗುವಳಿ ಮಾಡುತ್ತಿರುವ 4 ಎಕರೆ 10 ಗುಂಟೆ ಹೊರತುಪಡಿಸಿ ಇತರೇ ಸಾಗುವಳಿದಾರರ ಜಮೀನುಗಳ ಮೇಲೆ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿ. ನನ್ನ ಹೆಂಡತಿಗೆ ಸರ್ವೇ ನಂಬರ್ 60 ರಲ್ಲಿ ಜಮೀನು ಇರುತ್ತದೆ. ಪ್ರತಿವಾದಿಗಳು ಯಾವುದೇ ಜಾಗದಲ್ಲಿ ಬಗರ್ ಹುಕ್ಕುಂ ಅಡಿ ಸಾಗುವಳಿ ಮಾಡದಿದ್ದರೂ ಸುಳ್ಳು ಮಂಜೂರಾತಿ ಅರ್ಜಿ ನೀಡಿರುತ್ತಾರೆ ಎಂದರೆ ಸರಿಯಲ್ಲ.

ದಾವಾ ಶೆಡ್ಯೂಲ್ ಸ್ವತ್ತಿನಲ್ಲಿ ವಾದಿ 25-30 ವರ್ಷಗಳಿಂದ ಬಗರ್ ಹುಕ್ಕುಂ ಅಡಿ ಸಾಗುವಳಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಯ ಜಮೀನಿಗೂ ಹಾಗೂ ಪ್ರತಿವಾದಿಗಳ ಜಮೀನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತಿನ ಸ್ವಾಧೀನಕ್ಕೆ ಪ್ರತಿವಾದಿಗಳು ವಿನಾಕಾರಣ ತೊಂದರೆ ನೀಡುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಅರ್ಜಿ ನೀಡಿರುವ ಜಮೀನಿನಲ್ಲಿ ಲೋಕಾನಾಯ್ಕ ಎನ್ನುವವರು ಹಿಂದೆ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ವಾದಿ ಹಾಗೂ ಲೋಕಾನಯ್ಕ ರವರು ಸಾಗುವಳಿ ಮಾಡುತ್ತಿರುವ ಜಮೀನು ಅನ್ನು ಕಿತ್ತುಕೊಳ್ಳುವ ದುರುದ್ದೇಶದಿಂದ ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು station master ಆಗಿ ನಿವೃತ್ತಿಗೊಂಡಿರುತ್ತೇನೆ. ಪ್ರತಿವಾದಿಗಳಿಗೆ ನಾನೇ ಚಿತ್ತಾವಣೆ ನೀಡಿ ವಾದಿಯ ಸ್ವಾಧೀನಕ್ಕೆ ತೊಂದರೆ ನೀಡುತ್ತಿದ್ದೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಮುಖಾಂತರ ಸಾಕ್ಷ್ಯ ನುಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: